2. ಕಂಟ್ರಾಕ್ಟರು ಪ್ರತಿ ಮಾಹೇ ಮೊದಲನೇ ದಿನದಲ್ಲಿ ಮೇಲ್ಕಂಡ ಟರ್ಗಳ ಸೌದೇ ಒಪ್ಪಿಸತಕ್ಕದ್ದು.

3. ಪ್ರತಿ ಸ್ಟೇಷನಿನ ಸರಬರಾಯಿ ಬಗ್ಗೆ ಕತರಾಯಿಸಲ್ಪಡತಕ್ಕ ಮರಗಳು ವ ಜಂಗಲಿನ ಪ್ರದೇ ಸುದಾ ಫಾರೆಸ್ಟ್ ಇಲಾಖೇ ಯವರಿಂದ ಗುರ್ತು ಮಾಡಲ್ಪಡುವದು

4. ಕಂಟ್ರಾಕ್ಟಿನ ಷರತ್ತುಗಳು ದೇಖೀಲ್ ಹೆಚ್ಚಿಗೆ ತಪಸೀಲ್ ಬೆಂಗಳೂರು ಡಿಸ್ಟ್ರಿಕ್ಟ್ ಫಾರೆಸ್ಟ್ ಆಫೀಸರ್ ಅಸಿಸ್ಟೆಂಟ್ ಕನ್ಸರ್ವೇಟರ್ ಆಫೀಸಿನಲ್ಲಿ ವಿಚಾರಿಸಿ ತಿಳಕೊಳ್ಳ ಬಹುದು.

5. ಮೇಲ್ಕಂಡ ಸ್ಪೇರ್ಷಗಳ ಪೈಕೀ ಪ್ರತಿ ಸ್ಪೇರ್ಷನಲ್ಲಿಯೂ ಸಾದೆ ಯಸ್ತು ಕಮ್ಮಿದರಕ್ಕೆ ಒಪ್ಪಿಸಲ್ಪಡುವದೋ ಅಂಥಾ ಕಮ್ಮಿದರವನ್ನ ಪ್ರತಿ ದರಖಾಸ್ತಿನಲ್ಲಿಯೂ ನಮೂದಿಸತಕ್ಕದ್ದು. ದರಖಾಸ್ತಿನ ಸಂಗಡ ನಗದಾಗಿ ಯಾಗಲಿ ಕರ್ನಾಸೀ ನೋಟುಗಳ ಮೂಲಕ ವಾಗಲಿ 100 ರೂಪಾಯಿಗಳ ಡಿಪಾಜಿಟ್ ಕಳುಹಿಸಿದ ಹೊರ್ತು ಯಾವ ದರಖಾಸ್ತೂ ಅಂಗೀಕರಿಸಲ್ಪಡಲಾರದು. ಮೇಲ್ಕಂಡ ದರದಲ್ಲಿ ಸಾದೆ ಕಡಿಯುವ, ಸಾಗಿಸುವ ಕುಯ್ಯುವ ಮತ್ತು ರೆಯಿಲ್ವೇ ಸ್ಪೇರ್ಷಗಳಲ್ಲಿ ಸ್ಟ್ಯಾಕ್ ಅಂದರೆ ಕುಮಿದ ಸೌದೆಯನ್ನ ಕೇರಿಸುವ ವಿಸ್ತು ಲಾಗವಡೂ ಅಡಗಿರತಕ್ಕದ್ದು.

6. ಇದರಡೀ ರುಜೂ ಮಾಡಿರುವವರಿಂದ ಯಾ ಅವರಿಂದ ನೇಮಿಸಲ್ಪಟ್ಟವರಿಂದ ಅವರ ಆಫೀಸಿನಲ್ಲಿ 1887ನೇ ಇಸವಿ ಡಿಸಂಬರ್ 10ನೇ ತಾರೀಖು ಮಧ್ಯಾನ್ನ 12 ಘಂಟೆಗೆ ಹಾಜರ್ ಇರುವ ದರಖಾಸ್ತುದಾರರುಗಳ ರೂಬರೂ ದರಖಾಸ್ತುಗಳು ಖುಲ್ಲಾ ಮಾಡಲ್ಪಡುವವು.

7. ಇದರಡೀ ರುಜೂ ಮಾಡಿರತಕ್ಕವರು ಯಾವ ದರಖಾಸ್ತನ್ನಾಗಲಿ ಯಾವ ಸಬಬನ್ನೂ ತೋರಿಸದೆಯೇ ತಿರಸ್ಕರಿಸುವ ಸ್ವಾತಂತ್ರ್ಯವನ್ನ ತಮ್ಮಲ್ಲಿಪ ಉಳಿಸಿಕೊಂಡು ಯಿರುತ್ತಾರೆ.

8. ಯಾವ ಪೋಟಾಪೋಟಿದಾರನ ದರಖಾಸ್ತು ಮಂಜೂರ್ಮಾಡಲ್ಪಡುತ್ತೋ ಅಂಥಾವನ ಡಿಪಾಜಿಟ್ ಮೊಬಲಗು ನಿಲ್ಲಿಸಿಕೊಳ್ಳಲ್ಪಡುವ ವದು. ಆತನ ದರಖಾಸ್ತು ಮಂಜೂರ್ಮಾಡಲ್ಪಟ್ಟ ಸಂಗತಿ ಆತನಿಗೆ ತಿಳಿದ ತಾರೀಖು ಲಾಗಾಯಿತು ಒಂದು ಮಾರದವಳಗಾಗಿ ಸದರೀ ದರಖಾಸ್ತುದಾರನು ಕಂಟ್ರಾಕ್ಟು ಮುಚ್ಚಳಿಕೆ ಬರೆದು ಕೊಡಲಿಕ್ಕಾಗಲಿ ತನ್ನ ಕಂಟ್ರಾಕ್ಟು ಷರತ್ತುಗಳು ನೆರವೇರಿಸುವ ಬಗ್ಗೆ ನಗದು 500 ರೂಪಾಯಿಗಳು ಠೇವಣೀ, ಜಾಮೀನು ಹಾಜರ್ಮಾಡುವದಕ್ಕಾಗಲಿ ತಪ್ಪಿದರೆ ಆತನ ಡಿಪಾಜಿಟ್ ಮೊಬಲಗ್ ದಂಡವಾಗಿ ತೆಗದುಕೊಳ್ಳಲ್ಪಡುವದು.

9. ದರಖಾಸ್ತುಗಳ ಮೇಲೆ ಸಾತ್‌ಮರ್ತಾ ರೆಯಿಲ್ವೇಗೆ "ಸಾದೇ ಸರಬರಾಯಿ ಮಾಡುವ ಬಗ್ಗೆ ದರಖಾಸ್ತುಗಳು" ಯೆಂದು ಮೇಲ್‌ವಿಳಾಸ ಬರಯತಕ್ಕದ್ದು.

10. ದರಖಾಸ್ತುದಾರ್ ತನ್ನ ಮೊದಲನೇ ಸರಬರಾಯಿಯನ್ನ 1888ನೇ ಇಸವಿ ಫಿಬ್ರವರೀ 1ನೇ ಮಾರ್ಚ್‌ಒಳಗೆ ಮಾಡತಕ್ಕದ್ದು.

ಯಸ್. ಹೆಚ್. ವಾರ್ಡ್,
ಫಾರ್ ಡೆಪ್ಯೂಟಿ ಕಮ್ಮಿಷನರ್.

ಮೈಸೂರು ಡಿಸ್ಟ್ರಿಕ್ಟ್.

ಮೈಸೂರು ಡಿಸ್ಟ್ರಿಕ್ಟ್ ಜಡ್ಜ್‌ಯವರ ಕೋರ್ಟಿನಲ್ಲಿ.

1887ನೇ ಇಸವಿ ಅರ್ಜೀ ನಂಬರ್ 555.

ಮೃತಪಟ್ಟ ಮೊದೆಪಟೇಲ್ ದೊಡ್ಡೇಗವ್ವಡರ ಮತ್ತು ಇವರ ಮಗ ನಂಜೇಗವ್ವಡರ ಆಸ್ತೀ ವಿಷಯದಲ್ಲಿ—

ಅರ್ಜೀದಾರ ಮೊದೆ ಪಟೇಲ್ ದೊಡ್ಡೇಗವ್ವಡರು ಮೃತಪಟ್ಟ ಸದರೀ ದೊಡ್ಡೇಗವ್ವಡ ನಂಜೇಗವ್ವಡರಿಗೆ 1ನೇ ಯವನಿಗೆ ಮಗ 2ನೇ ಯವನಿಗೆ ತಮ್ಮ ಆಗಬೇಕೆಂಬ ಹಕ್ಕುದಾರೀ ಮೇಲೆ ಮಂಜರಾಬಾದ್ ತಾಲ್ಲೂಕು ಯಸಳೂರು ಹೋಬಳಿ ಬುರಡಿಕೆರೇ ಗ್ರಾಮದ ಸ್ಥಳದ ಸದರೀ ದೊಡ್ಡೇಗವ್ವಡರು ಸದರೀ ವಾಸಸ್ಥರಾಗಿ ಮೃತಪಟ್ಟ ದೊಡ್ಡೇಗವ್ವಡರ ನಂಜೇಗವ್ವಡರ ಜಿಂದಗೀ ಬಗ್ಗುಗಿ ಬರತಕ್ಕ 5000 ರೂಪಾಯಿಗಳ ಸಾಲವನ್ನು ವಸೂಲ್ ಮಾಡಿಕೊಳ್ಳುವದಕ್ಕೆ 1860ನೇ ಇಸವಿ 27ನೇ ಆಕ್ಟ್ ಮೇರಿಗೆ ಸರಟಿಫಿಕೇಟ್ ಬಗ್ಗೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ದೊಡ್ಡೇಗೌಡರ ಅರ್ಜೀಯನ್ನು 1888ನೇ ಇಸವಿ ಜನವರೀ ತಿಂಗಳು ತಾರೀಖು 6ರಲ್ಲು ಕೇಳಿ ಸರ್ಟಿಫಿಕೇಟ್ ಪಡೆಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ದೊಡ್ಡೇಗೌಡ. ನಂಜೇಗೌಡರ ಆಸ್ತಿಗೆ ಹಕ್ಕುದಾರರಾದ ವಿಸಷ್ಟರೂ ಈ ಕೋರ್ಟಿನಲ್ಲಿ ಹಾಜರು ಇರಬೇಕೆಂದು ಇದರಿಂದ ತಿಳಿಯಪಡಿಸಿದೆ.

1887ನೇ ಇಸವಿ ನವಂಬರ್ ತಿಂಗಳು 22ನೇ ತಾರೀಖಿನಲ್ಲಿ ಕೋರ್ಟು ಮೊಹರಿನಿಸೀ ನಮ್ಮದಸ್ತಖತ್ತಿನಿಂದ ಕೊಡೋಣಾಗಿದೆ.

ಯಸ್. ಹೇಮಾಚೆರಾವ್,
ಡಿಸ್ಟ್ರಿಕ್ಟ್ ಜಡ್ಜ್.